ತುಮಕೂರು ಡಿಸ್ಟ್ರಿಕ್ಟ್.

ಸ್ರ 1909ನೆ ಇಸವಿ ಸೆಪ್ಟಂಬರ್ ತಾರೀಖು 24ರಲ್ಲು ತುಮಕೂರು ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರುಗಳು ನಡೆಸಿದ ಮಿಟಿಂಗ್ ಪ್ರೊಸೀಡಿಂಗ್ಸ್.

ಹಾಜರು.

ಕೆ. ಥೊರೆಸ್ವಾಮಿ ಐಯ್ಯರ್ ಯವರು, ಎಸ್‌ಕ್ಯುಯರ್, ಪ್ರೆಸಿಡೆಂಟರವರು.

ನಂಬರ್.	ಮೆಂಬರುಗಳ ಹೆಸರು.	ಹಾಜರ್.	ಗೈರ್‌ಹಾಜರ್.
	ಎಕ್ಸ್ ಅಫಿಷಿಯೋ ಮೆಂಬರುಗಳು.		
1	ಮಿ|| ಎಲ್. ಮಾಧವರಾಯರು, ಟ್ರೆಜರಿ ಅಸಿಸ್ಟೆಂಟ್ ಕಮಿಷನರವರು ಮತ್ತು ಬೋರ್ಡಿನ ವೈಸ್ ಪ್ರೆಸಿಡೆಂಟರವರು.	ಹಾಜರ್.	...
2	,, ಸಿ. ವೆಂಕಟರಾಯರು, ತುಮಕೂರು ಮತ್ತು ಗುಬ್ಬಿ ಸಬ್ ಡಿವಿಜನ್ ಆಫಿಸರವರು.	ಡಿಟೋ	...
3	,, ಎಂ. ಎ. ನಾರಾಯಣ ಅಯ್ಯಂಗಾರ್ರು, ಮದ್ದಗಿರಿ ಸಬ್ ಡಿವಿಜನ್ ಆಫಿಸರವರು.	ಡಿಟೋ	...
4	,, ಬಿ. ರಾಮೈಯ್ಯನವರು, ತುಮಕೂರು ಡಿಸ್ಟ್ರಿಕ್ಟ್-ಆಫಿಷಿಯೇಟಿಂಗ್ ಸ್ಕೂಲ್‌ಗಳ ಡೆಪ್ಯುಟಿ ಇನ್‌ಸ್ಪೆಕ್ಟರವರು.	ಡಿಟೋ	...
5	,, ಸಿ. ಅಪ್ಪಾಥೊರ ಮೊದಲಿಯಾರ್‌ನವರು, ತುಮಕೂರು ಡಿಸ್ಟ್ರಿಕ್ಟ್ ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತು ಸ್ಯಾನಿಟರಿ ಆಫೀಸರವರು.	...	ಗೈರ್ ಹಾಜರ್.
6	,, ಕೆ. ಪ್ರಹ್ಲಾದರಾಯರವರು, ತುಮಕೂರು ಡಿವಿಜನ್ ಎಗ್ಸಿಕ್ಯೂಟಿವ್ ಇಂಜನಿಯರವರು.	...	ಡಿಟೋ
	ನಾನ್- ಅಫಿಷಿಯಲ್ ಮೆಂಬರುಗಳು.		
1	,, ಆದಪ್ಪ ಬಿ. ಕಪ್ಪಣಕಟ್ಟು, ತುಮಕೂರು	ಹಾಜರ್	...
2	,, ಮೈಲಾರಪ್ಪ ಬಿ. ಕೆಂಚಪ್ಪನವರು, ತುಮಕೂರು ...		ಗೈರ್ ಹಾಜರ್.
3	,, ಸೂರ್ಯನಾರಾಯಣರಾವ್ ಬಿ. ಮಲ್ಲಪ್ಪನವರು, ತುಮಕೂರು ...	ಹಾಜರ್.	...
4	,, ಜಿ. ಶಿವರಾಮೈಯ್ಯನವರು, ಮದ್ದಗಿರಿ	ಡಿಟೋ	...
5	,, ಕೆ. ಬಿ. ಶ್ರೀನಿವಾಸರಾಯರು, ಮದ್ದಗಿರಿ	ಡಿಟೋ	...
6	,, ಗಂಗೆಗೌಡರು, ಚಿಕ್ಕನಾಯಕನಹಳ್ಳಿ	ಡಿಟೋ	...
7	,, ಅಗಳೀ ವೆಂಕಟರಾಮೈಯ್ಯನವರು, ಶಿರಾ	ಡಿಟೋ	...
8	,, ಕೆ. ರಾಮಾನುಜೈಯ್ಯಂಗಾರ್ರು, ಗುಬ್ಬಿ	ಡಿಟೋ	...
9	,, ಹೊನ್ನಲಿಗೆ ಗೌಡರು, ಗುಬ್ಬಿ	ಡಿಟೋ	...
10	,, ಕಂಭುಲಿಂಗ ಶೆಟ್ಟರು, ಗುಬ್ಬಿ	...	ಗೈರ್ ಹಾಜರ್.
11	,, ಸಿ. ಶ್ರೀನಿವಾಸರಾಯರು, ಪಾವಗಡ	ಹಾಜರ್.	...
12	,, ಆಂಜನೇಯ ಶೆಟ್ಟರು, ಪಾವಗಡ	ಡಿಟೋ	...
13	,, ಶಿಂಗ್ರಾಚಾರ್ಯರು, ಕುಣಿಗಲ್	ಡಿಟೋ	...
14	,, ಹೆರೂರು ಗುಂಡಪ್ಪನವರು, ಕುಣಿಗಲ್	ಡಿಟೋ	...
15	,, ಆಬಿದಲ್ಲಿ ಸಾಹೇಬರು, ಕೊರಟಗೆರೆ	ಡಿಟೋ	...
16	,, ವೀರಶೆಟ್ಟರು, ತುರುವೇಕೆರೆ	ಡಿಟೋ	...
17	,, ಶಿಂಗ್ರಿ ನಂಜಪ್ಪನವರು, ತಿಪಟೂರು (ಫವತಿ) ...	...	
18	,, ಹೊನ್ನವಳ್ಳಿ ಕಂದಾಚಾರ್ ಸುಬ್ಬರಾಯರು, ತಿಪಟೂರು (ಫವತಿ) ...	...	

I. ಕಂಟ್ರೋಲರ್ ಸಾಹೇಬರವರಿಂದ ಆಡಿಟ್ಟಾದ 1909ನೆ ಮಾರ್ಚಿ, ಏಪ್ರೆಲ್ ಮತ್ತು ಮೇ ಮಾಹಿಗಳ ಡಿಸ್ಟ್ರಿಕ್ಟ್ ಫಂಡು ಜಮಾ ಖರ್ಚು ಲೆಕ್ಕಗಳನ್ನು ಓದಿ ಪ್ಯಾಸ್ಮಾಡಲಾಯಿತು.

II. ಸ್ಯ 1908—09ನೆ ಸಾಲಿನ ತುಮಕೂರು ಡಿಸ್ಟ್ರಿಕ್ಟ್ ಡಿಸ್ಟ್ರಿಕ್ಟ್ ಫಂಡ್ಸ್ ಅಡ್ಮಿನಿಸ್ಟ್ರೇಷನ್ ರಿಪೋರ್ಟನ್ನು ಓದಿ ಪ್ಯಾಸ್ಮಾಡಲಾಯಿತು.

III. ಲೋಕಲ್ ಬೋರ್ಡು ರೆಗ್ಯುಲೇಷನ್ ಅನುಸರಿಸಿ ಥಾಯಿಷಾದ ರೂಲ್ಸ್‌ಗಳ 132ನೆ ರೂ 5 ಎಫ್ ಕ್ಲಾಜಿನಲ್ಲಿ ಯೂನಿಯರ್ಡಿನ ಕೆಲವು ಬಾಬಿನ ಹುಟ್ಟುವಳೀ ವೊಖಲಗನ್ನು ಆಯಾ ಯೂನಿಯರ್ಡಗಾಗಿಯೆ ಉಪಯೋಗಿಸಲ್ಪಡತಕ್ಕದ್ದೆಂದು ವಿಧಾಯಕವಾಗಿರುತ್ತೆಂತಲೂ, ಗತ ಮೂರು ಸಾಲ್‌ಗಳಲ್ಲಿ ಡಿಸ್ಟ್ರಿಕ್ಟ್ ಆವುಳಿ ಯೂನಿಯನ್‌ಗಳಲ್ಲಿ ಆದ ಹುಟ್ಟುವಳೀ ಮತ್ತು ಖರ್ಚು ತೋರಿಸುವ ತಃಖ್ತೆಯನ್ನು ಕಳುಹಿಸಬೇಕಾಗಿ ವಗೈರೆ ನಮೂದಾದ 10—8—09ನೆ ಮರ್ಕುಂ 1432-9—ಲೋ. ಬೋ. 52-09-1ನೆ ನಂಬರ್ ಗೌರ್ನಮೆಂಟ್ ಪ್ರೊಸೀಡಿಂಗ್ಸನ್ನು ಓದಲಾಯಿತು.

ತೀರ್ಮಾನ—ಕೆಲವು ತಾಲ್ಲೂಕುಗಳಿಂದ ಈ ವಿಚಾರದಲ್ಲಿ ಆಪೇಕ್ಷಿತವಾದ ಎಲ್ಲಾ ತಪಶೀಲುಗಳು ತಲ್ಪಿರುವದಿಲ್ಲವಾಗಿ ಈ ವಿಚಾರವನ್ನು ಬೋರ್ಡಿನವರ ಮುಂದಿನ ಮೀಟಿಂಗಿನಲ್ಲಿ ಚರ್ಚಿಸತಕ್ಕದ್ದೆಂದು ತೀರ್ಮಾನಿಸಲಾಯಿತು.

IV. ಮೀಟಿಂಗ್‌ಗಳನ್ನು ನಡಿಸಲು ತಾರೀಖು ನಿಷ್ಕರ್ಷಿಸತಕ್ಕ ಮತ್ತು ಮೆಂಬರುಗಳಿಗೆ ನೋಟಿಸ್ ಕೊಡತಕ್ಕ ವಗೈರೆ ನಡವಳಿಕೆ ವಿಚಾರದಲ್ಲಿ ಲೋಕಲ್ ಬೋರ್ಡು ರೆಗ್ಯುಲೇಷನ್ 17ನೆ ಸೆಕ್ಷನ್ ಅನುಸಾರವಾಗಿ ರೂಲ್ಸ್‌ಗಳನ್ನು ಏರ್ಪಡಿಸತಕ್ಕ ಅವಶ್ಯಕತೇ ಕುರಿತು ಆಲೋಚಸಬಹುದೆಂತ ವಗೈರೆ ನಮೂದಿರುವ 12—8—09ನೆ ಮರ್ಕುಂ 1577-84—ಲೋ. ಬೋ. 394-08-4ನೆ ನಂಬರು ಗೌರ್ನಮೆಂಟ್ ಪ್ರೊಸೀಡಿಂಗ್ಸನ್ನು ಓದಲಾಯಿತು.

ತೀರ್ಮಾನ—ಈ ವಿಚಾರದಲ್ಲಿ ಯಾವ ರೂಲ್ಸ್‌ಗಳು ಅನಾವಶ್ಯಕವಾದ್ದಾಗಿರುತ್ತೆ. ಪ್ರತಿ ಮೀಟಿಂಗ್ ಆಖ್ಯೆರ್ ಆಗುತ್ತಲೇ ಮುಂದಿನ ಮೀಟಿಂಗ್ ನಡಿಸುವ ತಾರೀಖನ್ನು ನಿಷ್ಕರ್ಷಿಸಿ ಆ ತಾರೀಖನ್ನು ಪ್ರೊಸೀಡಿಂಗ್ಸಿನಲ್ಲಿ ನಮೂದಿಸಲ್ಪಡುತ್ತೆ. ಇಲ್ಲಿಗೆ ಈ ಪ್ರೊಸೀಡಿಂಗ್ಸುಗಳ ಅಚ್ಚಿನ ಪ್ರತಿಗಳು ಗೌರ್ನಮೆಂಟ್ ಪ್ರೆಸ್ಸಿನಿಂದ ತಲ್ಪುತ್ತಲಿವೆ. ಮತ್ತು ಮೀಟಿಂಗಿನಲ್ಲಿ ಹಾಜರಾಗಿದ್ದ ಮತ್ತು ಗೈರ್ ಹಾಜರಾದ ಬೋರ್ಡಿನ ಪ್ರತಿ ಮೆಂಬರಿಗೂ ಒಂದೊಂದು ಸದರೀ ಪ್ರತಿಯನ್ನು ಕ್ರಮವಾಗಿ ಕಳುಹಿಸಲ್ಪಡುತ್ತಲಿದೆ. ಹೀಗಿರುತ್ತಾ ಮತ್ತೂ ಒಂದು ನೋಟಿಸ್ ಈ ಬಾಬಿ ಕೊಡುವದರಿಂದ ಯಾವ ಪ್ರಯೋಜನವೂ ಕಂಡುಬರುವದಿಲ್ಲ.

V. ಮದ್ದಗಿರೀಲಿರುವ ಟ್ರಾವಿಲರ್ಸ್ ಬಂಗ್ಲಾ ರಿಪೇರಿ ಬಗ್ಯೆ 61 ರೂಪಾಯಿಗಳ ಅಂದಾಜವನ್ನು ಕೌಂಟರ್ ಸೈನ್ ಬಗ್ಯೆ ಕಳುಹಿಸಿರುವದಾಗಿ ನಮೂದಿರುವ ತುಮಕೂರು ಡಿವಿಜನ್ ಎಗ್ಜಿಕ್ಯೂಟಿವ್ ಇಂಜನಿಯರ್‌ಯವರ 2—9—09ನೆ ಮರ್ಕುಂ 362ನೆ ನಂಬರು ಡಾಕೆಟನ್ನು ಓದಲಾಯಿತು.

ತೀರ್ಮಾನ—ಆಗಬಹುದು.

VI. ತುಮಕೂರು-ಮದ್ದೂರೂ ರಸ್ತೆಲಿರುವ ಕೆಲವು ಮೊಹರಿಗಳನ್ನು ಜರೂರಾಗಿ ರಿಪೇರಿ ಮಾಡಿಸಲು ತಯಾರಾದ 495 ರೂಪಾಯಿಗಳ ಅಂದಾಜವನ್ನು ಕೌಂಟರ್ ಸೈನ್ ಬಗ್ಯೆ ಕಳುಹಿಸಿರುವದಾಗಿ ನಮೂದಿರುವ ತುಮಕೂರು ಡಿವೀಜನ್ ಎಗ್ಜಿಕ್ಯೂಟಿವ್ ಇಂಜನಿಯರವರ 16—9—09ನೆ ಮರ್ಕುಂ 367ನೆ ನಂಬರು ಡಾಕೇಟನ್ನು ಓದಲಾಯಿತು.

ತೀರ್ಮಾನ—ಆಗಬಹುದು.

VII. 1909ನೆ ಇಸವಿ ಸೆಪ್ಟಂಬರ್ 2ನೆ ತಾರೀಖಿನಲ್ಲಿ ಮತ್ತು ಆ ಮುಂದಿನ ದಿವಸಗಳಲ್ಲಿ ನಡೆಸಿದ ದಸರಾ ಪ್ರಜಾಪ್ರತಿನಿಧಿ ಸಭೆಯ ಮೆಂಬರುಗಳ ಪ್ರಲಿಮಿನೆರಿ ಮೀಟಿಂಗಿನಲ್ಲಿ ಚರ್ಚಿಸಿದ ಈ ಕೆಳಗೆ ಕಂಡ ವಿಷಯಗಳು ಡಿಸ್ಟ್ರಿಕ್ಟ್ ಬೋರ್ಡಿಗೆ ರಿಫರ್ ಮಾಡಲ್ಪಟ್ಟವು :—

(1) ಮದ್ದಗಿರಿ ತಾಲ್ಲೂಕು ಕೊಡಿಗೆನಹಳ್ಳಿ ಗ್ರಾಮದಲ್ಲಿ ಬಂದು ಮುಸಾಫರಖಾನೆಯನ್ನು ಕಟ್ಟಿಸತಕ್ಕ ಬಾಬಿ.

ತೀರ್ಮಾನ—ಈ ವಿಚಾರವು ಈ ಬಗ್ಯೆ ಹಣ ಬದಗುವ ಪರಿಯಂತ ನಿರೀಕ್ಷಿಸಬೇಕಾಗಿರುತ್ತೆ.

(2) ಮದ್ದಗಿರಿ-ಹಿಂದೂಪುರದ ಭಂಡಿ ಜಾಡು ರಿಪೇರಿ ಬಾಬಿ.

ತೀರ್ಮಾನ—ಈ ವಿಚಾರವನ್ನು ತಾಲ್ಲೂಕು ಬೋರ್ಡಿಗೆ ರಿಫರ್ ಮಾಡಬಹುದು.

(3) ಮಾಯಿಸಂದ್ರದ ಹೊಸ ಗ್ರಾಮ ತಾಣಾದಲ್ಲಿ ಬಂದು ಮುಸಾಫರಖಾನೆಯನ್ನು ಕಟ್ಟತಕ್ಕ ಬಾಬಿ.

ತೀರ್ಮಾನ—ಹೊಸದಾಗಿ ಗ್ರಾಮವನ್ನು ಕಟ್ಟಿದ ಬಳಿಕ ಈ ವಿಚಾರವನ್ನು ನಿಷ್ಕರ್ಷೆ ಮಾಡಬೇಕಾಗಿರುತ್ತೆ.

(4) ರಂಗನಾಥಪುರದ ಗ್ರಾಮದ ಮಾರ್ಗವಾಗಿ ಕಳ್ಳಂಬಿಳ್ಳದಿಂದ ಬುಕ್ಕಾಪಟ್ಟಣಕ್ಕೆ ರಸ್ತೆ ಹಾಕತಕ್ಕ ಬಾಬಿ.

ತೀರ್ಮಾನ—ಈ ರಸ್ತೆ ಅನಾವಶ್ಯಕವಾದ್ದಾಗಿರುತ್ತೆ.

(5) ಬಡದುಹೋದ ಅಂಕಸಂದ್ರದ ಕೆರೇಬಳಿ ಇರುವ ಹಳ್ಳಕ್ಕೆ ಬೇವಿನಹಳ್ಳಿ ಅಥವಾ ಪೋಟಕೆರೆ ಹತ್ತರ ಬಂದು ಸೇತುವೆ ಕಟ್ಟಿಸತಕ್ಕ ಬಾಬಿ.

ತೀರ್ಮಾನ—ಇಲ್ಲಿ ರಸ್ತೆಯೇ ಇಲ್ಲದೇ ಇರುವಲ್ಲಿ ಸೇತುವೆ ಅನಾವಶ್ಯಕವಾದ್ದಾಗಿರುತ್ತೆ.

VIII. ಸ್ಯ 1909ನೆ ಇಸವಿ ಡಿಸೆಂಬರ್ 20ನೆ ತಾರೀಖು ಮಧ್ಯಾಹ್ನ 3 ಘಂಟೆಗೆ ಬೋರ್ಡಿನವರು ಮುಂದಿನ ಮೀಟಿಂಗನ್ನು ನಡಿಸತಕ್ಕದ್ದೆಂದು ತೀರ್ಮಾನಿಸಲಾಯಿತು

ಕೆ. ಥೊರೆಸ್ವಾಮಿ ಐಯ್ಯರ್,
ಪ್ರೆಸಿಡೆಂಟ್.